ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು, ಮೀನುಗಾರಿಕೆ ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ರೂ. ೪,೬೫,೪೯,೧೦೦–೦೦

ಆ) ೪,೩೪,೭೬೦ (೧೯೭೮–೭೯ ರಿಂದ ೮೭–೮೮ರವರೆಗೆ)

ಇ) ಇಲ್ಲಾ

ಅರಸೀಕೆರೆ ತಾಲ್ಲೂಕು, ಗಂಡಸಿ ಜೂನಿಯರ್ ಕಾಲೇಜಿನ ಇಂಗ್ಲೀಷ್ ಉಪಾಧ್ಯಾಯರ ನೇಮಕಾತಿ ಬಗ್ಗೆ

೭೫೩. (೧೬೦೧) ಶ್ರೀ ಬಿ. ಶಿವರಾಮು (ಗಂಡಸಿ).—ಮಾನ್ಯ ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕು ಗಂಡಸಿ ಜೂನಿಯರ್ ಕಾಲೇಜ್ ೧೯೮೩–೮೪ರಲ್ಲಿ ಪ್ರಾರಂಭವಾಗಿದೆ. ಅಂದಿನಿಂದ ಈ ಕಾಲೇಜಿನಲ್ಲಿ ಇಂಗ್ಲೀಷ್ ಉಪನ್ಯಾಸಕರು ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಇಂಗ್ಲೀಷ್ ಉಪನ್ಯಾಸಕರನ್ನು ನೇಮಿಸಲು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು). —

ಅ) ಹೌದು.

ಆ) ಈಗ ನೇಮಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ತುಂಬೆ ತೋಟಗಾರಿಕೆಯ ವಿಸ್ತೀರ್ಣದ ಬಗ್ಗೆ

೭೫೪ (೧೬೧೪) ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ).—ಮಾನ್ಯ ಕೃಷಿ ಮತ್ತು ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ತುಂಬೆ ತೋಟಗಾರಿಕಾ ಇಲಾಖೆಯವರ ಸ್ವಾಧೀನದಲ್ಲಿರುವ ಒಟ್ಟು ಭೂಮಿ ಎಷ್ಟು ?

ಆ) ಆ ಭೂಮಿಯಲ್ಲಿ ಏನೇನು ಬೆಳೆಸುತ್ತಾರೆ ? ಇಲ್ಲಿ ತರಕಾರಿ ಬೀಜಗಳನ್ನು ಜನರಿಗೆ ಒದಗಿಸುವ ವ್ಯವಸ್ಥೆ ಇದೆಯೇ ?

ಶ್ರೀ ಎಸ್. ಬಂಗಾರಪ್ಪ (ಕೃಷಿ ಮತ್ತು ತೋಟಗಾರಿಕೆ ಸಚಿವರು). —

ಅ) ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ತುಂಬೆ ತೋಟಗಾರಿಕೆ ಕ್ಷೇತ್ರದ ಒಟ್ಟು ವಿಸ್ತೀರ್ಣ ೨೬.೭೨ ಎಕರೆಗಳು.

ಆ) ಈ ಸಸ್ಯ ಕ್ಷೇತ್ರದಲ್ಲಿ ಈ ಕೆಳಕಂಡ ತರಕಾರಿ ಭೀಜಗಳನ್ನು ಉತ್ಪಾದಿಸಿ ಜನರಿಗೆ ಒದಗಿಸಲಾಗುತ್ತಿದೆ.

೧. ಅಲಸಂದೆ ೨. ಬೆಂಡೆ ೩. ಬದನೆ ೪. ಹಾಗಲಕಾಯಿ
೫. ಹೀರೇಕಾಯಿ ೬. ಸೋರೇಕಾಯಿ